ಓದುವ ಜನರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಆದರೆ ಕತೆಯೊಂದನ್ನು ಓದಿದ ಓದುಗನಿಗೆ ಆ ಕತೆ ಖುಷಿಯನ್ನು ಕೊಟ್ಟಾಗ ಬರಹಗಾರನಿಗೆ ಧನ್ಯತಾಭಾವ ಮೂಡುವುದು ಸಹಜ. ಹಾಗೆ ನೋಡಿದರೆ ಸಾಹಿತ್ಯಕ್ಕಿಂತ ಸುಲಭವಾಗಿ ಹೆಚ್ಚು ಜನರನ್ನು ತಲುಪುವುದು ಸಂಗೀತ ಮತ್ತು ಸಿನಿಮಾ. ನನ್ನ ಕತೆಗಳಿಂದ ನಾನು ಏನನ್ನೂ ನಿರೀಕ್ಷಿಸದಿದ್ದರೂ ಅವು ನನ್ನನ್ನು ಸಮಾಜದಲ್ಲಿ ಗುರುತಿಸಲ್ಪಡುವಂತೆ ಮಾಡಿವೆ. ನಾನು ಕೆಲಸ ಮಾಡುವ ಇಲಾಖೆಯಲ್ಲಾಗಲೀ ಗೆಳೆಯರ ಬಳಗದಲ್ಲಾಗಲೀ ನನ್ನನ್ನು ಕತೆಗಾರನೆಂದೇ ಗುರುತಿಸುತ್ತಾರೆ. ಅದೊಂದು ಹೆಮ್ಮೆಯ ಸಂಗತಿ. ಕತೆಗಳು ನನ್ನನ್ನು ಎಷ್ಟೋ ಸಾರಿ ಸಂಕಷ್ಟಗಳಿಂದ ಪಾರು ಮಾಡಿವೆ. 80ರ ದಶಕದಲ್ಲಿ ನಾನು ಗುತ್ತಿಗೆ ಆಧಾರದ ಉಪನ್ಯಾಸಕನಾಗಿದ್ದಾಗ ಸಾವಿರದ ನೂರು ರೂಪಾಯಿ ವೇತನ ಬರುತ್ತಿತ್ತು. ಆದರೆ ಪ್ರತಿ ತಿಂಗಳು 300 ರೂಪಾಯಿಯಾದರೂ ಸಂಭಾವನೆ ಬರುತ್ತಿತ್ತು. ನನಗಿನ್ನೂ ಚನ್ನಾಗಿ ನೆನಪಿದೆ, 1988 ರಲ್ಲಿ ಒಂದೇ ತಿಂಗಳಲ್ಲಿ ಪ್ರಜಾವಾಣಿಯಿಂದ 300, ತರಂಗದಿಂದ 500, ಲಂಕೇಶ್ ಪತ್ರಿಕೆಯಿಂದ 400 ಹೀಗೆ ಒಟ್ಟು 1,200 ರೂ. ಸಂಭಾವನೆ ಪಡೆದು ಭಾಗ್ಯಶಾಲಿಯಾಗಿದ್ದುಂಟು. ಸಂಭಾವನೆ ಬಂದಾಗ ಸಹೋದ್ಯೋಗಿಗಳು 'ಗುಂಡು' ಹಾಕಿಸಿಕೊಂಡಿದ್ದೂ ಉಂಟು. ಕತೆಗಳು ನನ್ನನ್ನು ಕಾಪಾಡಿವೆ, ಖುಷಿ ಕೊಟ್ಟಿವೆ, ಒಂದಿಷ್ಟು ಖ್ಯಾತಿಯನ್ನೂ ತಂದುಕೊಟ್ಟಿವೆ. ಹಾಗಾಗಿ ನನ್ನ ಕತೆಗಳಿಗೆ ನಾನು ಸದಾ ಋಣಿಯಾಗಿರುತ್ತೇನೆಂದು ಯಾವ ಅಳುಕೂ ಇಲ್ಲದೆ ಹೇಳಬಲ್ಲೆ.

'ಪ್ರಜಾವಾಣಿ', 'ಮಯೂರ', 'ಸುಧಾ', 'ತರಂಗ', 'ಶೂದ್ರ' ಪತ್ರಿಕೆಗಳಲ್ಲಿ ನನ್ನ ದಲಿತ ಸಂವೇದಿ ಕತೆಗಳು ಪ್ರಕಟವಾದಾಗ ಕೆಲವು ಸಾಹಿತಿ ಮಿತ್ರರು ನಾನು ದಲಿತ ಜಾತಿಗೆ ಸೇರಿದವನೆಂದು ಬೇಕಾಗಿಯೇ ಹೆಸರನ್ನು ರೆಡ್ಡಿ ಎಂದು ಇಟ್ಟುಕೊಂಡಿರುವೆನೆಂದು ಕುಚೋದ್ಯದ ವಕ್ರೋಕ್ತಿಯ ಮಾತುಗಳನ್ನು ಆಡಿದ್ದೂ ಉಂಟು. ಅಂತಹ ಮಾತುಗಳು ನನ್ನ ಕಥನಗಾರಿಕೆಗೆ ಸಂದ ಪ್ರಶಸ್ತಿಗಳೆಂದೇ ನಾನು ಪರಿಭಾವಿಸಿಕೊಂಡಿದ್ದಿದೆ. ಹಾಗೆ ನೋಡಿದರೆ ಕುಂ.ವೀ. ಮತ್ತು ನಾನು ದಲಿತ ಬದುಕಿನ ಸ್ಥಿಗತಿಗಳನ್ನು, ಹಸಿವನ್ನು, ಸಂವೇದನೆಗಳನ್ನು ಯಾವ ದಲಿತ ಬರಹಗಾರನಿಗೂ ಕಡಿಮೆ ಇಲ್ಲದಂತೆ ನಮ್ಮ ಕತೆಗಳಲ್ಲಿ ಅನಾವರಣಗೊಳಿಸಿದ್ದೇವೆ. ಇದು ಖಂಡಿತವಾಗಿಯೂ ದಲಿತ ಜಗತ್ತಿನ ಬಗ್ಗೆ ನಮಗೆ ಇರುವ ಪ್ರೀತಿ ಮತ್ತು ನಮ್ಮ ಕಥನಗಾರಿಕೆಯ ಅಗಾಧ ಸಾಮರ್ಥ್ಯವನ್ನು ತೋರತ್ತದೆ ಎಂದೇ ನನ್ನ ನಂಬಿಕೆ.

ಯಾವುದೇ ಸಾಹಿತಿ, ಸಂಗೀತಗಾರ, ನಟ ಸದಾ ಕ್ರಿಯಾಶೀಲವಾಗಿರಬೇಕಾದರೆ ಅತೃಪ್ತನಾಗಿಯೇ ಇರಬೇಕು. ಈ ಅತೃಪ್ತಿ ಅವನಲ್ಲಿ ಮತ್ತಷ್ಟು ಶ್ರೇಷ್ಠವಾದ ಸಾಹಿತ್ಯ, ಸಂಗೀತ, ಕಲೆಯನ್ನು ಸೃಷ್ಟಿಸಲು ಸಾಧ್ಯವಾಗುವಂತೆ ಮಾಡುತ್ತದೆ. ನನಗೂ ಎಷ್ಟೋ ಸಂದರ್ಭಗಳಲ್ಲಿ ಕತೆ ಪ್ರಕಟಗೊಂಡನಂತರ ಇದನ್ನು ಮತ್ತಷ್ಟು ಚನ್ನಾಗಿ ಬರೆಯಬಹುದಿತ್ತೇನೋ ಎಂಬ ಆಲೋಚನೆ ಖಂಡಿತವಾಗಿಯೂ ಬಂದಿದ್ದಿದೆ. ಮತ್ತೊಂದು ಕತೆ ಬರೆದಾಗ ಅಂಥದ್ದನ್ನು ಸರಿಪಡಿಸಿಕೊಂಡಿರುವುದೂ ಉಂಟು.

ನಾನು ಮೂಲಭೂತವಾಗಿ ಅರ್ಥಶಾಸ್ತ್ರದ ವಿದ್ಯಾರ್ಥಿ. ಕತೆಗಳ ಮಾಪನ ಮಾಡುವುದಕ್ಕಂತೂ ನನಗೆ ಬರುವುದೇ ಇಲ್ಲ. ಸಾಹಿತ್ಯ ವಿದ್ಯಾರ್ಥಿಗಳಲ್ಲದವರೂ ಇಂದು ಅನೇಕ ಜನ ಗಂಭೀರ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಅಂಥವರಲ್ಲಿ ನಾನೂ ಒಬ್ಬ. ಕತೆಗಳ ಮಿತಿ ಮತ್ತು ಪರಂಪರೆಯ ಬಗ್ಗೆ ನನಗೆ ಅಷ್ಟೊಂದು ಜ್ಞಾನವಿಲ್ಲ. ಆದರೆ ಒಂದಂತೂ ಸತ್ಯ. ಯಾವುದೇ ಪ್ರಕಾರದ ಸಾಹಿತ್ಯವಾಗಲಿ ಸರಳವಾಗಿರಬೇಕು ಮತ್ತು ಜನರಿಗೆ ತಲುಪುವಂತಿರಬೇಕು. ಅನೇಕ ಪ್ರಶಸ್ತಿಗಳನ್ನು ಬಾಚಿಕೊಂಡ, ವಿಮರ್ಶಕರಿಂದ ಹೊಗಳಿಸಿಕೊಂಡ ಬಹುಪಾಲು ಕೃತಿಗಳು ಜನಸಾಮಾನ್ಯರಿಗೆ ತಲುಪದ,